pension

<u>ಕರ್ನಾಟಕ ಸರ್ಕಾರ</u>

ಸಂಖ್ಯೆ:ಆಇ(ವಿ) 56 ಪಿಇಎನ್ 2017

ಕರ್ನಾಟಕ ಸರ್ಕಾರದ ಸಚಿವಾಲಯ,
ಬಹುಮಹಡಿ ಕಟ್ಟಡ,
ಬೆಂಗಳೂರು, ದಿನಾಂಕ:12-10-2017.

ಸುತ್ತೋಲೆ 766
4/10/17

ವಿಷಯ: ಪಿಂಚಣಿ ಪ್ರಪತ್ರ ಮತ್ತು ಸೇವಾ ಪುಸ್ತಕವನ್ನು ಮಹಾಲೇಖಪಾಲರ ಕಛೇರಿಗೆ ಕಳುಹಿಸುವ ಸಂದರ್ಭದಲ್ಲಿ ತೆಗೆದುಕೊಳ್ಳಬೇಕಾದ ಮುನ್ನೆಚ್ಚರಿಕೆ ಕ್ರಮಗಳ ಬಗ್ಗೆ.

ಉಲ್ಲೇಖ: ಹಿರಿಯ ಉಪ ಮಹಾಲೇಖಪಾಲರು (ಪಿಂಚಣಿ) ಇವರ ಪತ್ರ ಸಂಖ್ಯೆ: ಇಡಿಪಿ(ಪಿಆರ್)/2017-18/87, ದಿನಾಂಕ:27-07-2017.

* * * *

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, ಸರ್ಕಾರಿ ಸೇವೆಯಿಂದ ನಿವೃತ್ತರಾಗುತ್ತಿರುವ ಸರ್ಕಾರಿ ನೌಕರರ ಪಿಂಚಣಿ ಮಂಜೂರಾತಿಗಾಗಿ ನಿವೃತ್ತಿಗೆ 03 ತಿಂಗಳ ಮುಂಚೆ ಮಹಾಲೇಖಪಾಲರ ಕಛೇರಿಗೆ ಪಿಂಚಣಿ ಪ್ರಪತ್ರ ಮತ್ತು ಸೇವಾ ಪುಸ್ತಕವನ್ನು ಕಳುಹಿಸುವ ಸಂದರ್ಭದಲ್ಲಿ ಅವುಗಳಲ್ಲಿ ಬಹಳಷ್ಟು ಲೋಪದೋಷಗಳು ಹಾಗೂ ನ್ಯೂನತೆಗಳು ಕಂಡುಬರುತ್ತಿರುವುದಾಗಿ ಮಹಾಲೇಖಪಾಲರು ಉಲ್ಲೇಖಿತ ಪತ್ರದಲ್ಲಿ ಪ್ರಸ್ತಾಪಿಸಿದ್ದು, ಈ ಬಗ್ಗೆ ಸರ್ಕಾರದಿಂದ ಸ್ಪಷ್ಟ ನಿರ್ದೇಶನ ನೀಡುವಂತೆ ಕೋರಿರುತ್ತಾರೆ.

ಮಹಾಲೇಖಪಾಲರ ಕಛೇರಿಗೆ ಪಿಂಚಣಿ ಪ್ರಕರಣಗಳಿಗೆ ಸಂಬಂಧಿಸಿದಂತೆ, ಪಿಂಚಣಿ ಪ್ರಪತ್ರ ಮತ್ತು ಸೇವಾ ಪುಸ್ತಕವನ್ನು ಕಳುಹಿಸುವ ಸಂದರ್ಭದಲ್ಲಿ ಸಾಮಾನ್ಯವಾಗಿ ಕಂಡುಬರುವ ಅಂತಹ ನ್ಯೂನತೆಗಳನ್ನು ಕೆಳಕಂಡಂತೆ ಪಟ್ಟಿಮಾಡಿರುತ್ತಾರೆ:-

ಎ)ಅಗತ್ಯ ಪಿಂಚಣಿ ದಾಖಲಾತಿಗಳಿಲ್ಲದೇ ಸೇವಾ ಪುಸ್ತಕವನ್ನು ಕಳುಹಿಸುವುದು;
ಬಿ) ಸೇವಾ ಪುಸ್ತಕವಿಲ್ಲದೇ ಪಿಂಚಣಿ ದಾಖಲಾತಿಗಳನ್ನು ಕಳುಹಿಸುವುದು;
ಸಿ) ಸೇವಾ ಪುಸ್ತಕ ಮತ್ತು ಪಿಂಚಣಿ ದಾಖಲಾತಿಗಳ ತಾಳೆಯಾಗದಿರುವಿಕೆ:
ಡಿ) ಸೇವಾ ಪುಸ್ತಕದ ನಕಲು ಪ್ರತಿಗಳನ್ನು ಲಗತ್ತಿಸಿ ಕಳುಹಿಸುವುದು;
ಇ) ನಿವೃತ್ತಿ/ಮರಣ ಹೊಂದಿದ ಎನ್.ಪಿ.ಎಸ್. ನೌಕರರ ಪ್ರಸ್ತಾವನೆಗಳನ್ನೂ ಕಳುಹಿಸುವುದು;
ಎಫ್) ಕೆಲವೊಮ್ಮೆ ಇತರೆ ಕಛೇರಿಗಳಿಗೆ ವಿಳಾಸ ಮಾಡಿದ ಸೇವಾ ಪುಸ್ತಕ ಮತ್ತು ಪಿಂಚಣಿ ದಾಖಲಾತಿಗಳನ್ನು ಕಳುಹಿಸುವುದು.

ಮೇಲೆ ವಿವರಿಸಿರುವ ಹಿನ್ನೆಲೆಯಲ್ಲಿ, ಇನ್ನು ಮುಂದೆ ಮಹಾಲೇಖಪಾಲರ ಕಛೇರಿಗೆ ಪಿಂಚಣಿ ಪ್ರಕರಣಗಳಿಗೆ ಸಂಬಂಧಿಸಿದಂತೆ ಪ್ರಪತ್ರ ಮತ್ತು ಸೇವಾ ಪುಸ್ತಕವನ್ನು ಕಳುಹಿಸುವಾಗ ಮೇಲಿನ ಲೋಪದೋಷಗಳಿಗೆ ಹಾಗೂ ನ್ಯೂನತೆಗಳಿಗೆ ಅವಕಾಶವಾಗದಂತೆ ಎಲ್ಲಾ ಸಂಬಂಧಪಟ್ಟ ಪ್ರಾಧಿಕಾರಗಳು ದಾಖಲೆಗಳನ್ನು ಸರಿಯಾಗಿ ಪರಿಶೀಲಿಸಿ ಕಳುಹಿಸುವಂತೆ ಈ ಮೂಲಕ ಕಟ್ಟುನಿಟ್ಟಾಗಿ ಸೂಚಿಸಲಾಗಿದೆ.

(ಆರ್.ವಸಂತ) 12/10/17
ಸರ್ಕಾರದ ಅಧೀನ ಕಾರ್ಯದರ್ಶಿ,
ಆರ್ಥಿಕ ಇಲಾಖೆ (ವಿಶ್ರಾಂತಿ ವೇತನ ಮತ್ತು
ಆರ್ಥಿಕ ಆಯೋಗ ಕೋಶ)

ಕರ್ನಾಟಕ ಸರ್ಕಾರ

ಸಂಖ್ಯೆ: ಕಾಶಿಇ/71/ಪಿಂಚಣಿ/ಸಿಆರ್2/2017-18

ಕಾಲೇಜು ಶಿಕ್ಷಣ ಆಯುಕ್ತರ ಕಛೇರಿ,
ಬೆಂಗಳೂರು, ದಿನಾಂಕ:27-10-2017

ಮೇಲ್ಕಂಡ ಸರ್ಕಾರಿ ಆದೇಶವನ್ನು ಈ ಕೆಳಕಂಡವರ ಮಾಹಿತಿ ಹಾಗೂ ಅಗತ್ಯ ಕ್ರಮಕ್ಕಾಗಿ ಪರಿಚಲಿಸಲಾಗಿದೆ.

ಕಾಲೇಜು ಶಿಕ್ಷಣ ನಿರ್ದೇಶಕರು (ಪ್ರ)

**ಇವರಿಗೆ,**

1. ಸರ್ಕಾರದ ಅಧೀನ ಕಾರ್ಯದರ್ಶಿಗಳು, ಆರ್ಥಿಕ ಇಲಾಖೆ(ವಿಶ್ರಾಂತಿ ವೇತನ ಮತ್ತು ಆರ್ಥಿಕ ಆಯೋಗ ಕೋಶ), ಬಹುಮಹಡಿ ಕಟ್ಟಡ, ಬೆಂಗಳೂರು – ಮಾಹಿತಿಗಾಗಿ
2. ಮಹಾಲೇಖಪಾಲರು, ಕರ್ನಾಟಕ, ಬೆಂಗಳೂರು – ಮಾಹಿತಿಗಾಗಿ
3. ಕೇಂದ್ರ ಕಛೇರಿ ಅಧಿಕಾರಿಗಳು/ ಎಲ್ಲಾ ಪ್ರಾದೇಶಿಕ ಜಂಟಿ ನಿರ್ದೇಶಕರು, ಕಾಲೇಜು ಶಿಕ್ಷಣ ಇಲಾಖೆ
4. ಪ್ರಾಂಶುಪಾಲರು, ಎಲ್ಲಾ ಸರ್ಕಾರಿ ಪ್ರಥಮ ದರ್ಜೆ ಕಾಲೇಜುಗಳು/ ಕಾನೂನು ಕಾಲೇಜುಗಳು
5. ಮಾಹಿತಿ ಅಧಿಕಾರಿಗಳು, ಕೇಂದ್ರ ಕಛೇರಿ, ಬೆಂಗಳೂರು –ಇಲಾಖಾ ವೆಬ್‌ಸೈಟ್‌ನಲ್ಲಿ ಪ್ರಕಟಿಸಬೇಕಾಗಿ ತಿಳಿಸಿದೆ
6. ಹೆಚ್ಚಿನ ಪ್ರತಿ & ಕಛೇರಿ ಪ್ರತಿ.